

ನನ್ನ ಮುಂದಿನಿಂದ ದಾಟಿ ಹೋಗುತ್ತಿದ್ದವು. ರಾಶಿ ರಾಶಿಯಾಗಿ ಸುತ್ತಲೂ ಎರಚಿದ ಹೂಗಳು ಹೊದ್ದ ತಬ್ಬಲಿತನದಲ್ಲಿ ಚೆಲ್ಲಾಪಿಲ್ಲಿಯಾಗಿದ್ದವು. ಉರಿಸಿಟ್ಟ ಊದುಬತ್ತಿಗಳಿಂದಲೇ ಉಸಿರುಗಟ್ಟಿದ ಅನುಭವವಾಗ್ತಿತ್ತು. ಸುತ್ತಲೂ ಅವಿರತವಾಗಿ ಗುಣಗಾನಗಳು, ಭಾವ-ಪ್ರಭಾವಗಳು, ಅಳು ಮತ್ತು ವಿಲಾಪಗಳು ಒಟ್ಟಾಗಿ ಒಂದು ಅಮಾನುಷ ಸ್ವರಪ್ರಭೇದದಂತೆ ಅನುರಣಿಸುತ್ತಿದ್ದವು. ನಾನೊಮ್ಮೆಗೂ ಮುಖವನ್ನು ಮೇಲೆತ್ತಲಿಲ್ಲ. ಯಾರೊಬ್ಬರನ್ನು ನೋಡಲಿಲ್ಲ, ಮಾತಾಡಲಿಲ್ಲ. ಅಗಾಧ ದುಃಖಭಾರಗಳಲ್ಲಿ ಇವರೆಲ್ಲರೂ ಒಟ್ಟಾಗಿದ್ದಾರೆ. ನಾನು ಮಾತ್ರ ಒಬ್ಬಳೇ ಇದ್ದೇನೆ. ಒಬ್ಬಳೇ ಆಗಿದ್ದೇನೆ - ಯಾಕೆ? ನನಗೇಕೆ ಏನೂ ಅನಿಸುತ್ತಿಲ್ಲ? ನಡುಗಡ್ಡೆಯಂತಾಗಿದ್ದೆ. ಇಡಿಯಾಗಿ ಸುತ್ತಲೂ ವ್ಯಾಪಿಸಿದ ನಿರ್ಗುಣ ಮೌನ. ಎಲ್ಲ ವಿಕಾರಗಳನ್ನೂ ಮೀರಿ ಒಳಗೇ ಕಲ್ಲಾಗುತ್ತಿರುವ ಮನಸ್ಸು. ಅಲ್ಲಿಗೇ ಕೀಲಿಸಿದ ಅನಿಸಿಕೆ. ಅಲ್ಪ ಚೇತನವನ್ನೆ ಎಳೆದು ಒಟ್ಟಾಗಿಸಿ ಹೇಗೋ ಒಮ್ಮೆ ಒಳಗೆ ರೂಮಿನ ಬಾಗಿಲ ಬಳಿ ಹೋದೆ. ಡಾಕ್ಟ್ರು ಬಂದು ಹೋಗಿದ್ದರು. ಚುಚ್ಚಿದ ಇಂಜೆಕ್ಷನಿನ ಪ್ರಭಾವದಲ್ಲಿ ಮಾಲಕ್ಕನನ್ನು ಸಣ್ಣ ಸಣ್ಣ ಮಂಪರು ಆವರಿಸುತ್ತಿತ್ತು. ಅವರ ತಲೆಯನ್ನು